# Second India-New Zealand Bilateral Cyber Dialogue

November 17, 2021

## ಎರಡನೇ ಭಾರತ-ನ್ಯೂಜಿಲೆಂಡ್ ದ್ವಿಪಕ್ಷೀಯ ಸೈಬರ್ ಸಂವಾದ

ನವೆಂಬರ್ 17, 2021

ಭಾರತ-ನ್ಯೂಜಿಲೆಂಡ್ ದ್ವಿಪಕ್ಷೀಯ ಸೈಬರ್ ಸಂವಾದದ ಎರಡನೇ ಆವೃತ್ತಿಯನ್ನು 16-17 ನವೆಂಬರ್ 2021 ರಂದು ವರ್ಚುವಲ್ ಮೋಡ್‌ನಲ್ಲಿ ನಡೆಸಲಾಯಿತು. ಭಾರತೀಯ ನಿಯೋಗವನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ (ಎಂಇಎ) ಜಂಟಿ ಕಾರ್ಯದರ್ಶಿ (ಸೈಬರ್ ಡಿಪ್ಲೊಮಸಿ) ಶ್ರೀ ಅತುಲ್ ಮಲ್ಹಾರಿ ಗೋತ್ಸುರ್ವೆರವರು ನೇತೃತ್ವ ವಹಿಸಿದ್ದರು. ನ್ಯೂಜಿಲೆಂಡ್ ನಿಯೋಗದ ಸಹ-ನೇತೃತ್ವವನ್ನು ಶ್ರೀ ಡಾನ್ ಈಟನ್, ನಿರ್ದೇಶಕರು ರಾಷ್ಟ್ರೀಯ ಭದ್ರತಾ ನೀತಿ, ಪ್ರಧಾನ ಮಂತ್ರಿ ಮತ್ತು ಕ್ಯಾಬಿನೆಟ್ ಇಲಾಖೆ (ಡಿಪಿಎಂಸಿ) ಮತ್ತು ಶ್ರೀಮತಿ ಜಾರ್ಜಿನಾ ಸರ್ಗಿಸನ್, ಆಕ್ಟಿಂಗ್ ಯೂನಿಟ್ ಮ್ಯಾನೇಜರ್, ಉದಯೋನ್ಮುಖ ಭದ್ರತಾ ಸಮಸ್ಯೆಗಳು, ಅಂತರರಾಷ್ಟ್ರೀಯ ಭದ್ರತೆ ಮತ್ತು ನಿಶ್ಯಸ್ತ್ರೀಕರಣ ವಿಭಾಗ, ವಿದೇಶಾಂಗ ವ್ಯವಹಾರಗಳು ಮತ್ತು ವ್ಯಾಪಾರ ಸಚಿವಾಲಯ (ಎಂಎಫ್‌ಎಟಿ)ರವರು ವಹಿಸಿದ್ದರು. ಎರಡೂ ದೇಶಗಳ ವಿವಿಧ ಸರ್ಕಾರಿ ಸಚಿವಾಲಯಗಳು ಮತ್ತು ಇಲಾಖೆಗಳ ಹಿರಿಯ ಅಧಿಕಾರಿಗಳು ಸೈಬರ್ ಸಂವಾದದಲ್ಲಿ ಭಾಗವಹಿಸಿದ್ದರು.

2. ಸೈಬರ್ ಸಂವಾದದಲ್ಲಿ ಸೈಬರ್‌ಸ್ಪೇಸ್‌ನಲ್ಲಿ ಅಸ್ತಿತ್ವದಲ್ಲಿರುವ ದ್ವಿಪಕ್ಷೀಯ ಸಹಕಾರದ ವಿವಿಧ ಅಂಶಗಳನ್ನು ಚರ್ಚಿಸಿದರು, ದ್ವಿಪಕ್ಷೀಯ, ಪ್ರಾದೇಶಿಕ ಮತ್ತು ಬಹುಪಕ್ಷೀಯ ವೇದಿಕೆಗಳಲ್ಲಿ ಸೈಬರ್ ಸಮಸ್ಯೆಗಳ ಇತ್ತೀಚಿನ ಬೆಳವಣಿಗೆಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು ಮತ್ತು ಸೈಬರ್ ಸಹಕಾರವನ್ನು ಇನ್ನಷ್ಟು ಬಲಗೊಳಿಸುವ ಉಪಕ್ರಮಗಳನ್ನು ಅನ್ವೇಷಿಸಿದರು.

3. ನಿಯೋಗಗಳು ಪರಸ್ಪರ ಆಸಕ್ತಿಯ ವ್ಯಾಪಕ ಶ್ರೇಣಿಯ ವಿಷಯಗಳ ಕುರಿತು ಚರ್ಚಿಸಿದವು ಮತ್ತು ಸೈಬರ್ ಭದ್ರತೆ, ಸೈಬರ್ ಅಪರಾಧ ಮತ್ತು ಸಾಮರ್ಥ್ಯ ನಿರ್ಮಾಣದ ಕ್ಷೇತ್ರಗಳಲ್ಲಿ ಪರಸ್ಪರ ನಿಕಟವಾಗಿ ಕೆಲಸ ಮಾಡಲು ಒಪ್ಪಿಕೊಂಡರು.

**ನವ ದೆಹಲಿ**
**ನವೆಂಬರ್ 17, 2021**

DISCLAIMER: This is an approximate translation. The original is available in English on MEA's website and may be referred to as the official press release.